
# ಸುದ್ದಿ ಸಂಚಯ

## ನೂತನ ಸಹಸ್ರಮಾನಕ್ಕಾಗಿ ಭಗವದ್ಗೀತೆಯ ಆಧುನಿಕ ವ್ಯಾಖ್ಯೆ

ಡಾ. ಸಿ.ಪಿ.ಕೃಷ್ಣ ಕುಮಾರ್ ಅವರು ಪುಸ್ತಕವನ್ನು ಬಿಡುಗಡೆ ಮಾಡುತ್ತಿರುವುದು.



ಎಡದಿಂದ ಡಾ.ಸಿ.ಪಿ.ಕೆ, ಸ್ವಾಮಿ ಆತ್ಮವಿದಾನಂದಜಿ ಮತ್ತು ಡಾ. ರಾಮಚಂದ್ರಸ್ವಾಮಿ

'ಭಗವದ್ಗೀತೆಯ ಸಂದೇಶ ಆಧುನಿಕ ಸಮಯದಲ್ಲಿ ಹೆಚ್ಚು ಪ್ರಸ್ತುತವಾಗಿದೆ. ನಮ್ಮ ಸಾಮಾಜಿಕ ಜೀವನದಲ್ಲಿ ಮುಸುಕಿರುವ ನಿರಾಶೆಯನ್ನು ಕಳೆದು, ಹೊಸ ಭರವಸೆಯನ್ನು ಮೂಡಿಸುವ ಅಪೂರ್ವವಾದ ಗ್ರಂಥ ಇದು. ಈ ಗ್ರಂಥವನ್ನು ಹೊಸ ಸಹಸ್ರಮಾನದಲ್ಲಿ ಆಧುನಿಕ ಚಿಂತನೆ ಮತ್ತು ಆಧುನಿಕ ಅವಶ್ಯಕತೆಗಳ ಬೆಳಕಿನಲ್ಲಿ ವ್ಯಾಖ್ಯಾನಿಸಿರುವ ಪೂಜ್ಯ ಸ್ವಾಮಿ ರಂಗನಾಥಾನಂದಜೀಯವರು ಗೀತೆಯ ಒಂದು ಅನನ್ಯವಾದ ಆಧುನಿಕ ವ್ಯಾಖ್ಯಾನವನ್ನು ನಮಗಿತ್ತಿದ್ದಾರೆ,' ಎಂದು ಖ್ಯಾತ ಸಾಹಿತಿಗಳಾದ ಡಾ.ಸಿ.ಪಿ.ಕೆ ಅವರು ನುಡಿದರು. ಅವರು ಮೈಸೂರಿನ ಶ್ರೀರಾಮಕೃಷ್ಣಾಶ್ರಮದಲ್ಲಿ ಕಳೆದ ಭಾನುವಾರದ ಸಂಜೆ ಭಗವದ್ಗೀತೆಯ ವಿಶ್ವಸಂದೇಶ ಎಂಬ ಗ್ರಂಥದ ಮೊದಲ ಭಾಗದ ಬಿಡುಗಡೆಯನ್ನು ಮಾಡಿದರು. ಈ ಗ್ರಂಥವು ಪೂಜ್ಯ ಸ್ವಾಮಿ ರಂಗನಾಥಾನಂದಜೀಯವರ ಇಂಗ್ಲಿಷ್ ಕೃತಿಯಾದ ***Universal Message of the Bhagavadgita*** ಎಂಬುದರ ಕನ್ನಡ ಅನುವಾದ.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸ್ವಾಮಿ ಆತ್ಮವಿದಾನಂದಜಿಯವರು ಮಾತನಾಡುತ್ತಾ, "ಶ್ರೀರಾಮಕೃಷ್ಣರು ಹೇಳುವಂತೆ, ಗೀತೆಯನ್ನು ಹತ್ತು ಬಾರಿ ಉಚ್ಚರಿಸಿದರೆ 'ತಾಗಿ ತಾಗಿ' ಎಂದಾಗುತ್ತದೆ. ಗೀತೆಯ ಮುಖ್ಯ ಸಂದೇಶವೇ ತ್ಯಾಗ. 'ಹೃದಯ ದೌರ್ಬಲ್ಯವನ್ನು ತ್ಯಜಿಸಿ ಎದ್ದೇಳು' ಎಂದು ತ್ಯಾಗದಿಂದಲೇ ಗೀತೆಯ ಉಪದೇಶ ಪ್ರಾರಂಭವಾಗಿ, 'ಎಲ್ಲ ಧರ್ಮಗಳನ್ನೂ ತ್ಯಾಗ ಮಾಡಿ ಭಗವಂತನಲ್ಲೇ ಶರಣಾಗು' ಎಂದು ತ್ಯಾಗದಲ್ಲಿಯೇ ಅದರ ಉಪದೇಶ ಕೊನೆಗೊಳ್ಳುತ್ತದೆ.' ಇಂದಿನ ಧನಪ್ರಧಾನ ಮತ್ತು ಭೋಗಪ್ರಧಾನ ನಾಗರಿಕತೆಯಲ್ಲಿ ಈ ತ್ಯಾಗದ ಸಂದೇಶ ಅತ್ಯಗತ್ಯವಾಗಿ ನಮಗೆ ಬೇಕಾಗಿದೆ" ಎಂದು ನುಡಿದರು.

ಈ ಮುಂಚೆ ಸ್ವಾಗತ ಭಾಷಣ ಮಾಡಿದ ಸ್ವಾಮಿ ನಿತ್ಯಸ್ಥಾನಂದಜೀಯವರು ಗೀತೆಯ ಮೊದಲನೆ ಸಂಪುಟದ ಸಂಕ್ಷೇಪ ಪರಿಚಯವನ್ನು ಮಾಡಿಕೊಟ್ಟರು. ಈ ಗ್ರಂಥದ ಅನುವಾದ ಕೆಲಸವನ್ನು ಪ್ರೀತಿಯಿಂದ ಹಾಗೂ ಶ್ರದ್ಧೆಯಿಂದ ಮಾಡಿರುವ ಶೃಂಗೇರಿಯ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಡಾ. ಎಚ್ ರಾಮಚಂದ್ರಸ್ವಾಮಿಯವರನ್ನು ಕನ್ನಡಿಗರೆಲ್ಲರ ಮತ್ತು ಆಶ್ರಮದ ಪರವಾಗಿ ಅಭಿನಂದಿಸಿದರು. ಗೀತೆಯ ಈ ಆಧುನಿಕ ವ್ಯಾಖ್ಯೆ ಹೆಚ್ಚು ಜನರನ್ನು ತಲುಪವಂತಾಗಲಿ ಎಂಬ ಉದ್ದೇಶದಿಂದ ಗ್ರಂಥವನ್ನು ಆದಷ್ಟು ಕಡಿಮೆ ಬೆಲೆಯಲ್ಲಿ ಮಾರಲಾಗುತ್ತಿದೆ ಎಂದೂ ಅವರು ನುಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗ್ರಂಥದ ಅನುವಾದಕರಾದ ಡಾ.ಎಚ್. ರಾಮಚಂದ್ರಸ್ವಾಮಿಯವರು ಮಾತನಾಡಿ, ಅನುವಾದದ ಸಂದರ್ಭದಲ್ಲಿ ತಾವು ಉಂಡ ಆನಂದಾನುಭವವನ್ನು ಸಭಿಕರೊಡನೆ ಹಂಚಿಕೊಂಡರು.

ಇದೇ ಸಂದರ್ಭದಲ್ಲಿ ಆಶ್ರಮದ ಎರಡು ಹೊಸ ಪ್ರಕಟನೆಗಳಾದ "ಮಕ್ಕಳಿಗಾಗಿ ಸಚಿತ್ರ ಕಥೆಗಳು" ಹಾಗೂ ಸ್ವಾಮಿ ಪುರುಷೋತ್ತಮಾನಂದಜೀಯರಿಂದ ರಚಿತವಾದ "ಯುಗಾವತಾರ ಶ್ರೀರಾಮಕೃಷ್ಣ" ದ ಎರಡನೇ ಭಾಗವನ್ನು ಬಿಡುಗಡೆ ಮಾಡಲಾಯಿತು.

**Managing Editor: Swami Atmavidananda** **Editor: Swami Nityasthananda**

Printed and Published by Swami Atmavidananda, for Sri Ramakrishna Ashrama, Yadavagiri, Mysore - 570 020
Printed at **Vinayaka Offset Printers**, Shed No.4-D,172/1,Bannerughatta Road,
Sreenivasa Industrial Estate, Bangalore -560 076